ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ: ಹ.ಬ.ವಿವಾದ: 49:2015-16 ದಿ: ೨೦-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಯಲ್ಲಪ್ಪ ತಂದೆ: ಲೇಟ್ ಮಲ್ಲಪ್ಪ
ಮೈಲಾಪುರ ಗ್ರಾಮ ಸಿರುಗುಪ್ಪ ತಾಲೂಕ
2) ಸರಸಮ್ಮ ಗಂಡ: ಯಂಕಪ್ಪ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಸಾವಿತ್ರಮ್ಮ ಗಂಡ: ಶಂಕ್ರಪ್ಪ ಲೇಟ್
ಮೈಲಾಪುರ ಕ್ಯಾಂಪ್
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಬೂದುಗುಪ್ಪ ಗ್ರಾಮ | 39/4 | 2-00 | H17/2015-16 | 83/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಬೂದುಗುಪ್ಪ ಗ್ರಾಮದ** ಸ.ನಂ. **39/4** ವಿಸ್ತೀರ್ಣ **2-00 ಎಕರೆ** ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ **ಪತ್ರ ನಂ: SRG-1-5045/2015-16** ದಿ:**21-10-2015** ರಂದು **ಯಲ್ಲಪ್ಪ ತಂದೆ: ಲೇಟ್ ಮಲ್ಲಪ್ಪ ಇವರ ಹೆಸರಿನಲ್ಲಿ ಕ್ರಯಪತ್ರ ನೊಂದಣಿ ಹೊಂದಿದ್ದು** ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಸಾವಿತ್ರಮ್ಮ ಗಂಡ: ಲೇಟ್ ಶಂಕ್ರಪ್ಪ ಮೈಲಾಪುರ ಕ್ಯಾಂಪ್** ಇವರು ದಿ: **4-11-2015** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **01-02-2016 , 4-3-2016, 26-3-2016, 11-4-2016** ಮತ್ತು **20-5-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

..ಗಳು

ವಾದಿಗಳಾದ ಯಲ್ಲಪ್ಪ ತಂದೆ: ಮಲ್ಲಪ್ಪ ಮೈಲಾಪುರ ಗ್ರಾಮ ಇವರು ಬೂದುಗುಪ್ಪ ಗ್ರಾಮದ ಸ.ನಂ. 39/4 ವಿಸ್ತೀರ್ಣ 2-00 ಎಕರೆ ಜಮೀನು ಶ್ರೀಮತಿ: ನರಸಮ್ಮ ಗಂಡ: ಯಂಕಪ್ಪ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ:SRG-1-5045/2015-16 ದಿ:21-10-2015ರ ಪ್ರಕಾರ ಕ್ರಯನೋಂದಣಿಯೊಂದಿಗೆ ಕ್ರಯಕ್ಕೆ ತೆಗೆದು ಕೊಂಡು ಹಕ್ಕು ಬದಲಾವಣೆಗಾಗಿ ಬಂದ ಸಂದರ್ಭದಲ್ಲಿ ಸಾವಿತ್ರಮ್ಮ ಗಂಡ: ಲೇಟ್ ಶಂಕ್ರಪ್ಪ ಮೈಲಾಪುರ ಕ್ಯಾಂಪ್ ಇವರು ನಮ್ಮ ಅತ್ತೆಯಾದ ನರಸಮ್ಮ ನವರ ಹೆಸರಿನಲ್ಲಿ ಪಟ್ಟ ಇದ್ದು ಪಿತ್ರಾರ್ಜಿತ ಆಸ್ತಿಯಾಗಿ ನನ್ನ ಗಂಡನಾದ ಶಂಕ್ರಪ್ಪನ ಭಾಗಕ್ಕೆ ಬಂದಿದ್ದು ಸದ್ರಿ ನನ್ನ ಗಂಡ ಮರಣ ಹೊಂದಿದ್ದರಿಂದ ನನ್ನ ಅತ್ತೆ ಮತ್ತು ಅವರ ಕುಟುಂಬದವರು ನನಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಯಲ್ಲಪ್ಪ ಇವರಿಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆಂದು ದಿ:4-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ.

ಸಾವಿತ್ರಮ್ಮ ಗಂಡ: ಶಂಕ್ರಪ್ಪ ಇವರು ಸದರಿ ಆಸ್ತಿಯಲ್ಲಿ ತಮಗೂ ಪಾಲು ಬರುತ್ತದೆ ಎಂದು ನಿರಾಧಾರವಾಗಿ ಆಕ್ಷೇಪಣೆ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ನರಸಮ್ಮ ಗಂಡ ಯಂಕಪ್ಪ ಇವರು ಸದರಿ ಆಸ್ತಿ ಅವರ ಸ್ವಯಾರ್ಜಿತವಾಗಿದ್ದು ಅವರ ತವರುಮನೆಯಿಂದ ಬಂದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ನನಗೆ ಮಾರಾಟ ಮಾಡಿ ನೋಂದಣಿ ಮಾಡಿಕೊಟ್ಟಿರುವುದು ಸರಿಯಾಗಿರುತ್ತದೆ. ಖರೀದಿ ನೋಂದಣಿ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಸಾವಿತ್ರಮ್ಮ ಗಂಡ: ಲೇಟ್ ಶಂಕ್ರಪ್ಪ ಮೈಲಾಪುರ ಕ್ಯಾಂಪ್ ಇವರು ನಮ್ಮ ಅತ್ತೆಯಾದ ನರಸಮ್ಮ ನವರ ಹೆಸರಿನಲ್ಲಿ ಪಟ್ಟ ಇದ್ದು ಪಿತ್ರಾರ್ಜಿತ ಆಸ್ತಿಯಾಗಿ ನನ್ನ ಗಂಡನಾದ ಶಂಕ್ರಪ್ಪ ನ ಭಾಗಕ್ಕೆ ಬಂದಿದ್ದು ಸದ್ರಿ ನನ್ನ ಗಂಡ ಮೃತ್ಯ ಹೊಂದಿದ್ದರಿಂದ ನನ್ನ ಅತ್ತೆ ಮತ್ತು ಅವರ ಕುಟುಂಬದವರು ನನಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಯಲ್ಲಪ್ಪ ಇವರಿಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆಂದು ದಿ: 4-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ನೋಟೀಸ್ ನೀಡಿದಾಗ್ಯೂ ಯಾವುದೇ ದಿನಾಂಕದಂದು ವಿಚಾರಣೆಗೆ ಹಾಜರಾಗಿರುವುದಿಲ್ಲ ಹಾಗೂ ಯಾವುದೇ ಲಿಖಿತ ಹೇಳಿಕೆಗಳನ್ನು ಇಲ್ಲಿಯವರಿಗೂ ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಖರೀದಿ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಸ.ನಂ.39/4 ವಿಸ್ತೀರ್ಣ 2-00 ಎಕರೆ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 5045/2015-16 ದಿ: 21-10-2015 ರ ಪ್ರಕಾರ ಯಲ್ಲಪ್ಪ ತಂದೆ: ಮಲ್ಲಪ್ಪ ಲೇಟ್ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:20-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ತಾಲೂಕು ಸಿರುಗುಪ್ಪ, ಜಿಲ್ಲೆ

ಇದರ ಪ್ರತಿಯನ್ನು:
1. ವಾದಿ ಹಾಗೂ ಪ್ರತಿವಾದಿಗಳಿಗೆ
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ